## ತುರ್ತಾದಲ್ಲಿ ಕಂಡ ಶಾಸನಗಳು

1399ರಲ್ಲಿ ಹಂಪಿಗೆ ಮೂರು ಕಿ.ಮೀ. ದೂರದಲ್ಲಿ ನಿರ್ಮಿಸಿದ್ದು ತುರ್ತಾ ಅಣೆಕಟ್ಟು. ಐದಾರು ಪುಟ್ಟ ಪುಟ್ಟ ನಡುಗಡ್ಡೆಗಳನ್ನು ಸೇರಿಸಿ ಅಣೆಕಟ್ಟು ಹಾಕಲಾಗಿದೆ. ಇಲ್ಲಿನ ಒಂದು ಕಲ್ಲು ಗುಂಡಿನ ಮೇಲೆ ಶಾಸನವಿರುವ ಬಗ್ಗೆ ಓದಿದ್ದೆ.

ಅಣೆಕಟ್ಟೆ ಬಳಿ ಹುಡುಕಾಡತೊಡಗಿದೆ, ಅಲ್ಲಿ ಹಲವಾರು ಬಂಡೆಗಳಿದ್ದವು, ಕೆಲಸ ಮಾಡುವವರನ್ನು ಕೇಳಿದಾಗ 'ಆ ಬಂಡೆ ಮ್ಯಾಲೆ ಏನೋ ಬರೆದೈತೆ' ಅಂದರು. ಒಂದೇ ಉಸಿರಿಗೆ ಅತ್ತ ಧಾವಿಸಿದೆ. ಅಲ್ಲಿನ ಮಧ್ಯಮ ಗಾತ್ರದ ಒಂದು ಬಂಡೆ ಮೇಲೆ ಗೋಚರಿಸಿಯೇಬಿಟ್ಟಿತು ಆ ಶಾಸನ. 'ಚಿಂತಾಯಕ ದೇವಣ್ಣನು, ಬೊಮ್ಮೋಜನು ವಿರೂಪಾಕ್ಷನ ಅಪ್ಪಣೆಯಲ್ಲಿ ನಿರ್ಮಿಸಿದ' ಎಂಬುದು ಆ ಮೂರು ಸಾಲಿನ ಶಾಸನದ ತಾತ್ಪರ್ಯ. 'ಈ ಗುಂಡಿನ ಮೇಲೂ ಏನೋ ಬರೆದೈತೆ' ಎಂದರು ಕೆಲಸದವರು. ಹೌದು, ಸಮೀಪದಲ್ಲೇ ಒಂದು ಸಣ್ಣ ಕಲ್ಲು ಗುಂಡಿನ ಮೇಲೆ ಮತ್ತೊಂದು ಶಾಸನವಿತ್ತು.

ತಲೆಕೆಳಕಾಗಿ ಬಿದ್ದಿದ್ದ ಶಾಸನದಲ್ಲಿ ಶಿವ ಹಾಗೂ ಚಂದ್ರನ ಗುರುತುಗಳಿದ್ದವು, ಜೊತೆಗೆ ಅಕ್ಷರಗಳ ಸಾಲು. ಈ ಶಾಸನದ ಬಗ್ಗೆ ಎಲ್ಲಿಯೂ ಪ್ರಸ್ತಾಪವಾದ ನೆನಪಾಗಲಿಲ್ಲ. ಅಣೆಕಟ್ಟೆಯ ನೀರು ಶೇಖರಣೆ ಸ್ಥಳದಲ್ಲಿ ಬಿದ್ದಿರುವುದರಿಂದ ಬಹುಶಃ ಸದಾ ನೀರಿನಲ್ಲಿಯೇ ಮುಳುಗಿದ್ದು ಇದೇ ಮೊದಲ ಬಾರಿ ಗೋಚರವಾಗುತ್ತಿರಬಹುದು. ವಿಜಯನಗರದ ಅಣೆಕಟ್ಟುಗಳ ಬಗ್ಗೆ ಬೆರಳೆಣಿಕೆಯ ದಾಖಲೆಗಳಷ್ಟೇ ಲಭ್ಯವಿವೆ. ಹಾಗಾಗಿ ಈ ಎರಡೂ ಶಾಸನಗಳನ್ನು ಜೋಪಾನವಾಗಿ ಕಾಪಾಡಬೇಕಿದೆ.

## ಕಲ್ಲು ಸಂಕಗಳು

ಕಂಪ್ಲಿಯ ಅಣೆಕಟ್ಟನ್ನು ನೋಡುವುದೂ ಸಾಹಸ. ಒಂದೂವರೆ ಕಿಲೋಮೀಟರ್ ನದಿಯಲ್ಲಿ ನಡೆದು ಹೋಗಬೇಕು. ತಾತ್ಕಾಲಿಕ ರಸ್ತೆ ಇದ್ದುದರಿಂದ ಇದು ಸಾಧ್ಯವಾಗಿತ್ತು. ಸ್ಥಳೀಯ ಕಪ್ಪು ಕಲ್ಲುಗಳನ್ನು ಅಣೆಕಟ್ಟೆಗೆ ಬಳಸಲಾಗಿದೆ. ಇಲ್ಲಿ ಕಂಡ ವೈಶಿಷ್ಟ್ಯವೆಂದರೆ, ಕಲ್ಲು ಚಪ್ಪಡಿ ಸಂಕಗಳು.

ನದಿಯಲ್ಲಿನ ಸಣ್ಣ ಸಣ್ಣ ನೀರಿನ ಹರಿವುಗಳನ್ನು ದಾಟಿ ಹೋಗಲು ಸುಮಾರು 4 ಅಡಿ ಅಗಲ, 7–8 ಅಡಿ ಉದ್ದದ ಮೂರು ಚಪ್ಪಡಿಗಳನ್ನು ಹಾಸಲಾಗಿದೆ. ಎತ್ತರದ ಹುಲ್ಲಿನ ಪೊದೆಯೊಳಗಿರುವ ಇವು ಸುಲಭಕ್ಕೆ ಕಾಣುವುದಿಲ್ಲ. ಶತಮಾನಗಳ ಕಾಲ ನೀರಿನ ಹರಿವಿನಿಂದಾಗಿ ಇವು ಕಪ್ಪು ಬಣ್ಣಕ್ಕೆ ತಿರುಗಿವೆ. ಕಂಪ್ಲಿ, ಕುಮ್ಮಟದುರ್ಗ, ವಿಜಯನಗರದ ಅರಸರು, ಸೈನಿಕರು, ದನಗಾಹಿಗಳು, ಜನರು ಅಡ್ಡಾಡಿರುವ ಕಲ್ಲುಗಳ ಮೇಲೆ ನಾವೂ ಓಡಾಡಿ ಪುಳಕ ಅನುಭವಿಸಿದೆವು.


ಕಂಪ್ಲಿಯ ಕಲ್ಲು ಚಪ್ಪಡಿ ಸಂಕಗಳು


ಹೂಳು ಸಂಗ್ರಹವಾಗದಂತೆ ವಿನ್ಯಾಸ ಮಾಡಿರುವ ಆನೆಗುಂದಿ ಅಣೆಕಟ್ಟು

## ಆನೆಗುಂದಿ ಅಣೆಕಟ್ಟೆಯ ಅಚ್ಚರಿ

ವಿಜಯನಗರ ಅರಸರ ಅವಧಿಯಲ್ಲಿ 12 ಅಣೆಕಟ್ಟುಗಳು ನಿರ್ಮಾಣವಾಗಿವೆ. ಅವುಗಳ ಪೈಕಿ ನದಿಯ ಎಡಭಾಗದಲ್ಲಿರುವ ಆನೆಗುಂದಿ ಅಣೆಕಟ್ಟು (ಸಣಾಪುರದ ಬಳಿ) ಆ ಕಾಲದ ನಿರ್ಮಾಣ ಕುಶಲತೆಯನ್ನು ಸಾರುವ ಶ್ರೇಷ್ಠ ಮಾದರಿ. ನದಿಯ ಒಂದು ಕವಲಿಗೆ ಕಟ್ಟಲಾಗಿದ್ದು ಈಗಲೂ ಗಟ್ಟಿಮುಟ್ಟಾಗಿದೆ. ಬೃಹತ್ ಗಾತ್ರದ ಸೈಜುಗಲ್ಲುಗಳು, ಸಣ್ಣ ಕಲ್ಲುಗಳು, ಚಪ್ಪಡಿಗಳು, ಗುಂಡುಗಳು, ಕಬ್ಬಿಣದ ಸರಳು, ಹಿಡಿಕೆ... ಹೀಗೆ ಅಗತ್ಯಕ್ಕನುಗುಣವಾಗಿ ಎಲ್ಲವನ್ನೂ ಬಳಸಿಕೊಂಡು ಅರ್ಧ ಚಂದ್ರಾಕಾರದಲ್ಲಿ ಇದನ್ನು ನಿರ್ಮಿಸಲಾಗಿದೆ. ಅಣೆಕಟ್ಟೆಯು ಸುಮಾರು ಏಳೆಂಟು ಅಡಿ ಎತ್ತರವಾಗಿದೆ. ಕಟ್ಟೆಯ ಮೇಲೆ ಹಾಗೂ ನೀರು ಸಂಗ್ರಹಾಗಾರದ ನಡುವೆ ಬಸವಣ್ಣನ ವಿಗ್ರಹಗಳಿವೆ.

ವಿಜಯನಗರ ಕಾಲದ ಎಲ್ಲಾ ಅಣೆಕಟ್ಟುಗಳನ್ನು ಹೂಳು ಸಂಗ್ರಹವಾಗದಂತೆ ವಿನ್ಯಾಸ ಮಾಡಲಾಗಿದೆ. ಆನೆಗುಂದಿ ಅಣೆಕಟ್ಟನ್ನು ಗಮನಿಸಿದರೆ ಆ ರಚನಾ ಕೌಶಲ ಅರ್ಥವಾಗುತ್ತದೆ.

ಒಂದು ಕಿಲೋಮೀಟರ್‌ವರೆಗೆ ನಿಲ್ಲುವ ಹಿನ್ನೀರು ನಯನ ಮನೋಹರ. ಎರಡು ಗುಡ್ಡಗಳ ನಡುವಿನ ಈ ಜಲರಾಶಿಯು ನೀರು ನಾಯಿ, ಮೊಸಳೆ, ಆಮೆ ಮುಂತಾದ ಜಲಚರಗಳ ವಾಸಸ್ಥಾನ. ಹೊಸೂರು, ತುರ್ತಾ, ಕಂಪ್ಲಿ ಅಣೆಕಟ್ಟುಗಳು ನದಿ ನೀರು ತುಂಬಾ ಕಡಿಮೆಯಾದಾಗ ಮಾತ್ರ ನೋಡಲು ಸಾಧ್ಯ. ಆದರೆ ಆನೆಗುಂದಿ ಅಣೆಕಟ್ಟನ್ನು ತೆಪ್ಪದಲ್ಲಿ ಹೋಗಿ ನೋಡುವ ಅವಕಾಶವಿದೆ. ಹಲವು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಹಾಗಾಗಿ ಅಣೆಕಟ್ಟೆಯ ಮಹತ್ವ ಮತ್ತು ಇತಿಹಾಸವನ್ನು ಅರುಹುವ ಒಂದು ಫಲಕವನ್ನು ಇಲ್ಲಿ ಹಾಕುವ ಅಗತ್ಯವಿದೆ.

ಅಣೆಕಟ್ಟೆಯಲ್ಲಿ ಸಂಗ್ರಹವಾದ ನೀರನ್ನು ಅಚ್ಚುಕಟ್ಟಿಗೆ ಸಾಗಿಸಲು ನದಿಯ ಪಕ್ಕದಲ್ಲೇ ಸುಮಾರು ಅರ್ಧ ಕಿಲೋಮೀಟರ್ ಉದ್ದದ ತಡೆಗೋಡೆಗೆ ಬೃಹತ್ ಗಾತ್ರದ ಕಲ್ಲು ಕಂಬಗಳನ್ನು ಜೋಡಿಸಿರುವ ರೀತಿ ಬೆರಗುಗೊಳಿಸುವಂತಹದು. ಆನೆಗುಂದಿ ಕಾಲುವೆಯು 19 ಕಿಲೋಮೀಟರ್ ಉದ್ದವಿದ್ದು, ಅಂಜನಾದ್ರಿ ಬೆಟ್ಟದ ಬುಡದಲ್ಲಿಯೇ ಹಾದುಹೋಗುತ್ತದೆ. ಅಲ್ಲದೆ ಪುರಾತನ ಪಂಪಾ ಸರೋವರಕ್ಕೆ ಈ ಕಾಲುವೆಯ ಒಂದು ಕವಲು ಸಂಪರ್ಕ ಹೊಂದಿರುವುದು ಮತ್ತೊಂದು ಅಚ್ಚರಿ.

ಮೇಲೆ ಹೇಳಿದ ಅಣೆಕಟ್ಟುಗಳಂತೆಯೇ ಇನ್ನೂ ಹಲವಾರಿವೆ. ಹುಲಿಗಿ, ಶಿವಪುರ, ಚಿಕ್ಕಜಂತಕಲ್, ಹಿರೇಜಂತಕಲ್, ರಾಮಸಾಗರ ಅಣೆಕಟ್ಟುಗಳು ಹಂಪಿ ಮತ್ತು ಆನೆಗುಂದಿ ಸುತ್ತಮುತ್ತ ಇವೆ. ಪ್ರತಿಯೊಂದರ ರಚನೆಯೂ ವಿಶಿಷ್ಟ. ಹಂಪಿಗೆ ದೂರದಲ್ಲಿರುವ, ಆದರೆ ವಿಜಯನಗರ ಆಳ್ವಿಕೆಯ ಅವಧಿಯಲ್ಲಿಯೇ ನಿರ್ಮಾಣವಾಗಿರುವ ಬೆನ್ನೂರು, ಸಿರುಗುಪ್ಪ, ದೇಶನೂರು, ರಾಯಚೂರು ಬಳಿಯ ಬಿಚ್ಚಾಲಿ ಹಾಗೂ ಆಂಧ್ರ ಪ್ರದೇಶದಲ್ಲಿರುವ ತುಂಬಿಗನೂರು ಅಣೆಕಟ್ಟುಗಳೂ ಒಂದಕ್ಕೊಂದು ವಿಭಿನ್ನ ಹಾಗೂ ಆಕರ್ಷಕ.

ರಾಜ್ಯದಲ್ಲಿ ನದಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ನಿರ್ಮಿಸಿ ಬಳಸಿಕೊಂಡ ಉದಾಹರಣೆಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಅವುಗಳ ಬಗ್ಗೆ ದಾಖಲೆಗಳೂ ಲಭ್ಯ. ಆದರೆ ಈಗಲೂ ಬಳಕೆಯಲ್ಲಿರುವುದು ಹಾಗೂ ನೋಡಲು ಸಿಗುವುದು ವಿಜಯನಗರದ ನೀರಾವರಿ ಅಣೆಕಟ್ಟುಗಳು ಮತ್ತು ಕಾಲುವೆಗಳು. ಅವುಗಳನ್ನು ಮೂಲ ಸ್ವರೂಪದಲ್ಲಿಯೇ ಉಳಿಸಿಕೊಳ್ಳುವ ಹೊಣೆಗಾರಿಕೆ ನಮ್ಮದು.

ಪ್ರತಿಕ್ರಿಯಿಸಿ: feedback@sudha.co.in